THE MYSORE LEGISLATIVE ASSEMBLY.

NINTH DAY.

Saturday, 28th June 1952.

The House met in the Assembly Hall, Old Public Offices, Bangalore, at Thirty Minutes past Eight of the Clock.

Mr. Speaker (Sri H. Siddaiya, B.A., LL.B.) in the Chair.

QUESTIONS AND ANSWERS.

Reforms in the Educational System.

Q.—156. **Sri N. C. NAGIAH REDDY** (Goribidnur)—

Will the Government be pleased to state:—

(*a*) whether they contemplate to bring about reforms in the system of education of our State;

(*b*) if so, whether it will be possible for them to state the broad outlines of the reforms that they are contemplating to bring about and the procedure they will adopt in formulating and giving effect to those reforms?

A.—**Sri A. G. RAMACHANDRA RAO** (Minister for Law and Education).—

(*a*) The question of reorganisation of the system of education in the State to suit the changed conditions is under the consideration of Government.

(*b*) Not at this stage.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಈ ವಿಚಾರವನ್ನು ಪರಿಶೀಲಿಸುವುದಕ್ಕೆ ಒಂದು ಸಮಿತಿಯನ್ನು ಮಾಡಬೇಕೆಂದು ಯೋಚನೆಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಮಿತಿಯನ್ನು ಮಾಡಬೇಕೇ ಬೇಡವೇ ಎನ್ನುವುದು ಕೂಡ ಯೋಚನೆಯಲ್ಲಿದೆ

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಪಾಧಾಪದ್ಧತಿಯ ಪ್ರಕಾರ ಮಾಡಬೇಕೆಂದು ಯೋಚನೆಮಾಡಿದ್ದೀರಾ?

Sri A. G. RAMACHANDRA RAO—That is also one of the systems under consideration.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಪರಿಶೀಲನೆಯಾವ ಸ್ಟೇಜಿನಲ್ಲಿದೆ?

Sri A. G. RAMACHANDRA RAO.—We are receptive to all suggestions.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸುವ ಸಂಬಂಧದಲ್ಲಿ ಡಾ॥ ರೆಡ್ಡಿಯವರ ವರದಿಯೂ ನಿಮ್ಮ ಮುಂದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದೆ.

ಶ್ರೀ ಜಿ. ನಾರಾಯಣಗೌಡರು (ಮಾಳಬಾಗಲು–ಶ್ರೀನಿವಾಸಪುರ).—ಈ ವಿಷಯದಲ್ಲಿ ಒಂದು ಬಿಲ್ಲು ತಯಾರಾಗಿ ಅದು ಕೂಡ ತಮ್ಮ ಮುಂದಿದೆಯಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದೆ. It has been placed on the table.

ಶ್ರೀ ಜಿ. ನಾರಾಯಣಗೌಡರು.—ಈಗ ಇದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಬೇರೆ ಪ್ರವೀಣರನ್ನು ಕರೆಯಿಸುವ ಯೋಚನೆ ಇದೆಯೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂರು)–ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆಯಾಗಬೇಕೆಂದು ಬಹಳ ವರ್ಷಗಳಿಂದಲೂ ಹೇಳುತ್ತಿದ್ದಾರಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸುಧಾರಣೆಯಾಗಬೇಕೆಂದು ಡಾಕ್ಟರ್ ರಾಧಾಕೃಷ್ಣನ್, ಡಾಕ್ಟರ್ ರೆಡ್ಡಿ ಇವರು ಈಗಾಗಲೇ ಶಿಫಾರಸು ಮಾಡಿದ್ದಾರಲ್ಲವೆ!

ಶ್ರೀ ಎ. ಜಿ. ರಾಮಚಂದ್ರರಾಯರು.—ಮಾಡಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈಗಾಗಲೇ ಇಷ್ಟು ಶಿಫಾರಸುಗಳು ಮುಂದಿರುವಾಗ ಬೇರೊಬ್ಬರನ್ನು ನೇಮಕಮಾಡಬೇಕೆಂದು ಹೇಳುವುದಕ್ಕೆ ಕಾರಣ ವೇನು!

ಶ್ರೀ ಎ. ಜಿ. ರಾಮಚಂದ್ರರಾಯರು.—ಇಂಡಿಯಾ ಸರ್ಕಾರದವರು ಸೆಕೆಂಡರಿ ವಿದ್ಯಾಭ್ಯಾಸವನ್ನು ಸುಧಾರಣೆಮಾಡುವ ಬಗ್ಗೆ ಒಂದು ಕಮಿಷನ್ ನೇಮಕಮಾಡಬೇಕೆಂದಿರುವುದರಿಂದ, ಇದನ್ನು ಪುನಃ ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಏನು ಸುಧಾರಣೆ ಮಾಡಬೇಕೆಂದು ಯೋಚನೆಯಿದೆ ಎಂಬುದನ್ನು ಸ್ಥೂಲವಾಗಿ ಹೇಳುವುದಕ್ಕೆ ಸಾಧ್ಯವೆ!

Mr. SPEAKER.—The first question has been discussed sufficiently on previous occasions.

———